Lahari Communique

NEWS LETTER FOR PRIVATE CIRCULATION AMONG THE LEGAL FRATERNITY

Volume 14 July 2002 Part 4

## Rama Jois made Governor

Mr. Justice Rama Jois, retired Chief Justice of Punjab and Haryana High Court has been appointed as the new Governor of Jharkhand. Ranchi Rajbhavan was vacant since January 2002 as its previous accupant Mr. Prabhakar Kumar had resigned. Pursuant to this appointment Justice Rama Jois was sworn in by the Chief Justice of Jharkhand High Court in a ceremony held at Rajbhavan on July 15.

## Union Law Minister

In the Cabinet reshuffle which took place on July 1, 2002 Mr. Ja. Na. Krishnamurthy has been inducted as the new Union Minister for Law and Justice, former President of BJP is originally a lawyer from Chennai. Mr. Krishnamurthy takes over from Mr. Arun Jaitely, who resigned the post opting for party work. Mr. Ravishankar Prasad has been made the Minister of State in the same ministry.

## Appointment

Mr. K. Satyanand, District and Sessions Judge from Hyderabad has been appointed as the presiding officer of the Debts Recovery Tribunal, Bangalore. On 3.7.2002 the new PO took charge. He replaces Mr. Nisar Ahmed who retired on 20.5.2002.

## Crisis in Manipur

Judicial Officers in Manipur went on two days casual leave on July 26 in protest against the attacks on the house of Justice N. Surjamani, Judge, Gauhati High Court, and a demonstration against his ruling by the Congress activists.

The State Government had withdrawn guards from the residential premises of Mr. Justice Surjamani and high Court premises in the wake of the order made by him asking the Chief Minister Okram Ibobi Singh to appear before the high court in a pending case. The Chief Justice of the high court had to issue a directive to the Governer Vedprakash Marwah to restore security deployment only after which state government restored security.

The issue took a political turn when the speaker Mr. T. N. Haokip announced that a showcause notices would be served on Justice Surjamani and Justice B B Deb of the Imphal bench of the Gauhati High Court for contempt of House on the basis of a resolution passed by the State Assembly. Mr. Haokip said he was seeking the opinion of legal experts and is also in touch with the Lok Sabha Speaker. Further developments are eagerly watched by all the concerned.

## Cabinet nod for CAT abolition

The Cabinet meeting of the Union Government met on July 18 took a decision to abolish the Central Administrative Tribunals which are presently adjudicating on the grievances of the Central Government employees. The Union Minister and Cabinet Spokesperson Ms. Sushma Swaraj announced in New Delhi that a Bill seeking for abolition of CAT created under the Administrative Tribunals Act which would be introduced shortly. Interestingly she said that as and when request fro abolition of State Administrative Tribunals are received steps will be taken to abolish SATs as well. She disclosed that the abolition of CATs had become necessary in the wake of judicial pronouncements under which appeals are provided to the high courts from the orders of CATs and then to the Supreme Court.

## No Total Opposition

In an interesting development the Tamil Nadu Government issued a statement on July 29 clarified that it had placed on record reservations regarding certain names proposed by the high court for appointment of 11 persons as judges of the court. Responding to a report in a section of the press that the State Government has blocked all the names proposed by the high court the statement clarified that the names of certain persons has been cleared. Speaking to Newspersons Chief Minister Jayalalitha said that the appointment of Judges should be viewed in "strict confidence" and it might not be in the public interest to reveal State Government's misgivings. She pointed out that as per the dictum reported in AIR 1994 SC in the Supreme Court Advocates on record case, the view expressed in the Presidential Reference by the nine member bench of the Supreme Court as reported in AIR 1999 SC the State Government had a "defininite role" in analysing the proposals of the high court. Elaborating her statement, she pointed out, that the views of the State Government and proposals of the High Court will be studied by the Ministry of Law, Union of India and finally by the Supreme Court of India. As such reservations expressed by the State Government is legitimate and not final.

## News Panorama

In a Judgment delivered during third week of July the Pakistan Supreme Court upheld the Validity of election order prescribing minimum qualification of BA or its equivalent degree for contesting as a member of Parliament and Provincial Assemblies. The court termed this qualification as a step towards the change in "political culture". Further the court held that education - related qualifications is reasonable and are not arbitrary or whimsical as it is founded on reasonable basis and equally applies to all the graduates.

## Around the courts

- **Appointment of HC Judges as a commission of inquiry should be done in rare cases;**

In a judgment delivered on July 15, a three judge bench of the apex court comprising Chief Justice B. N. Kirpal, Justice Y. K. Sabharwal and Justice K G. Balakrishnan held that sitting judges of the high court could not be appointed to hold a post under any other authority as it may not be in the best interest of independent judiciary. While disposing of a special leave petition filed by T. Fenn Walter and others, a group of Advocates, against the judgment of Madras High Court challenging the appointment of Justice E Padmanabhan, a sitting judge of the High Court, as a president of the State Consumer Disputer Redressal Commission, Pondichery the bench however said the appointment of a sitting judge as a commission of inquiry under commissions of Inquirty Act might not be objectionable but it had to be made only on rare occassions, if it becomes necessary for the paramount national interest. Appointment of a sitting judge to a Tribunal is not desirable where the adjudicating members are composed of other members who are not judges or qualified to be appointed as judges such as beaurocrats, revenue officials etc the bench observed. The court further observed that where expertise and experience of a sitting judge was required to discharge the functions, then he could be appointed, for example as a member of finance or law commission.

When the Chief Justice of a high court is consulted for appointment of a sitting judge as member, Chairman, Vice-Chairman, President of any court, Commission or Tribunal and it is a

see page 3

# Judges Appointed

❑ The President of India has appointed 13 new judges for Allahabad High Court on July 3, 2002. The appointments will take effect from the date they assume charge of their office. The appointees, in that order of seniority, are Mr. Mahendra Pratap Singh; Mr. Ramesh Chandra Pandey; Mr. Chakravarti Prabhakar Mishra; Ms. Mithlesh Choudhary; Mr. Vijaishankar Bajpai; Mr. Pranav Kumar Chatterji; Mr. Om Prakash Srivatsava; Mr. Shilendra Shankar Kulshrestha; Mr. Gopal Krishna Gupta; Mr. Venkateshwar Narain Singh; Mr. Yogendra Ram Tripathi; Mr. Kailash Nath Sinha and Mr. Narendra Kishore Mehrotra.

❑ The President has appointed Mr. Mazaffar Jan as a judge of the Jammu & Kashmir High Court. This appointment is done in first week of July would take effect from the date of assumption of charge. Justice Mazaffar Jan was already functioning as an additional judge of the same high court before this appointment

❑ On July 26 the President of India has appointed Pemmasani Sankara Narayana, Gorla Rohini, Tamada Gopalakrishna and Lingala Narasimha Reddy, additional judges of the Andhra Pradesh High Court, to be judges of the same High Court in that order of seniority.

# Recognition obtained

The Chairman of Shanthi Law College Council, Malavalli (Mandya District) and Former Minister K. N. Nage Gowda in a press statement dtd July 15 has claimed that the Bar Council of India has given recognition to the college and the institution is affiliated to Mysore University. The College is offering both three year and five year degree courses in law.

# Lahari Law Academy

Under the auspices of the Academy a workshop on the civil procedure code as amended in 1999 and 2002 has been organised to be held on sunday the August 25, 2002. Persons interested to be delegates may contact Mr. Aravind Kumar, Addl. Central Government Standing Counsel, on Phone : 2202843/ 2254180

# Kolar Diary

❑ On 29 July, Principal District and Sessions Judge, G.V. Hegde, inaugurated the Lok Adalat at Kolar. In the inaugural address he called upon Advocates to educate people on the benefits of approaching the lok adalats. "Even though disputes were settled faster at the lok adalats, a majority of the people were not approaching them. People Should desist from approaching courts for settling petty disputes", Mr. Hegde said.

Mr. C. Kondandappa, Advocate, said lawyers should highlight the benefits of Lok Adalats offered among the people Mr. K. V. Shankarappa, Advocate, underlined the importance of government officials in the lok adalats. Mr. N. Sampath Kumar, President, Kolar Bar Association Presided over the function.

❑ On 20.7.2002 Mr. S. P. Shankar, Advocate from Bangalore addressed the members of Gowribidanur Bar Association regarding the effect of Amendments to Civil Procedure Code brought during 1999, and 2002. Mr. Justice V. Gopal Gowda and Mr. Justice A. V. Srinivas Reddy, Judges, High Court of Karnataka also addressed the members.

# Court inaugurated

In a function held on 13.7.2002 Mr. Justice N. K. Jain, Chief Justice, High Court of Karnataka inaugurated the third stage of court complex of District and Sessions Judge Court Complex at Koppal. Mr. D. B. Chandregowda, Minister for Law and Parliamentary Affairs was the Chief guest. On the same occassion Mr. Justice V. Gopal Gowda, Judge, High Court of Karnataka inaugurated the new building of the fast track court. Mr. Dharam Singh, Minister for PWD, Government of Karnataka inaugurated construction work of the first floor of the court complex. Mr. Mallikarjuna Nagappa, Minister of State for Revenue, Government of Karnataka inaugurated the newly built drinking water facility in the court complex.

# Wedding

We are glad to report that : On 1.7.2002 Mr. Y. N. Ravi Prakash, Advocate married Ms. G. Girija at Bangalore.

# Unforgettable journey to Almighty's Abode

***travelogue account of Mr. K. C. Mehta, Advocate***

*It is the wish of the Lord and his consort that me and my beloved daughters Ms. Nandini and Ms. Chandrika should visit to their abode which resulted in our names being picked-up by the Ministry of External Affairs (MEA) choosing our names by random method to be the pilgrims to undertake sojourn to Kailash and Manasarovar.*

We left Bangalore on May 31, 2002 by Train to Delhi. There was briefing at the MEA, wherein Medical tests were done and foreign exchange was arranged. Passport and Medical fitness are must for this journey. The total expenses of Yatra is about Rs. 57,000/- per pilgrim, which includes the cost of woolen clothing, money payable to Kumaon Mandal Vikas Nigam, China, Medicines, China Visa fee, to and fro train, pony and yak charges etc., Pilgrims were felicitated by All India Kailash Manasa Sarovar Samithi and the Lt. Governor of Delhi. Thereafter, we left Delhi by Mini bus towards Mangti near Dherchula covering a total distance of 652 Kms. in 2 and a half days, enroute Kathagodam, Bhowali, Almore (1,646 M. Ht) and Dherchula (900 M. ht.). From Mangti pilgrim has to treck or go by pony for 87 to 90 kms upto Indo-China Border till Lipu Lekh Pass (5,334 M.Ht) enroute Gala Camp (2,440 M.ht) : Budhi Camp (2,580 M. ht), Gunji Camp (3220 M. Ht), where 3rd Medical tests are conducted : Kalapani Camp (3,600 M. ht) : Nabid hang Camp (4,246 M. ht) : From Lipu Lek Pass pilgrims are taken over by the Chinese Authorities to Taklakot (4,000 M. ht), 19 Kms from Lipu Lekh Pass. Immigration check and Foreign exchange from dollar to chinese Yuan are done at Taklakot.

After 2 days, piligrims were taken by bus to Darchen or Tarchen, 140 kms from Taklakot, the first base camp of Mount Kailash at height of 5,182 meters, from where 3 days parikrama started on foot and on yak. The 2nd camp was at Deraphuk which is 20 kms away from Darchen. The next day we proceeded to Zongzerbu a distance of 25 kms, enroute Dolma Pass (5,500 M. Ht. i.e., 19,500 Feet). On the 3rd day we reached Darchen completing the Parikarama of (57 Kms.) Mount Kailash. From Darchen we were taken by bus to Kugu or Tugu camp on the bank of Manasarovar, adjacent to Gurla Mandhata Ice mountains and then to Chieu Camp on the other side of Manasarovar nearer Kailash Mountain Range. Thus completing the parikrama of Manasa Sarovar covering 82 kms by bus. We also visited Khojernath 20 kms from Taklakot, where there is an ancient Sree Rama Temple and Buddist Monastery. We returned to Delhi at night on July 1, 2002.

The Journey is very hazardous, arduous, risky and tiresome. Above the altitude of 10,000 feet there is scarce oxygen as there is no vegetation at all. Pilgrims experience breathlessness, thirst and fatigue at high altitudes. There is steady acclimatisation of altitude in this route. The Indo-Tibetian border police provide protection all throughout the route upto China Border. Two doctors were with the pilgrims. The Yatra via Nepal is found to be fatal to several pilgrims as they are suddenly taken upto the heighest altitude without steady acclimatisation.

One gets lost in the high mountains of the Great Himalayas. The splendous and beauty of the high mountains, ice peaks, glaciers, fast moving Kali Ganga River, Cascades, colourful flowers, Pine trees at lower heights are beyond description. The very sight of the celestial Mount Kailash is at once sublime, maginificent, transcendental, timeless, signifying eternity. It is a Crest Jewel of the Himalayas, called "RIMPOCHI" by the Tibetians, sacred for Hindus, Budhists and Jains. Mount Kailash is also called Mount Meru of the Puranas and it is naval of the Earth wielding electro magnetic force around. The enchanting Manasa Sarovar lake, considered the holiest of the holy lakes, is vast like a sea ever changing its colours from emerald green to turquoes blue and purple, common tranquil crystal clear water, the source of great rivers like Sindhu, Bhramhaputra, Sarayu. The water has therapeutic value.

*Vāgarthāviva Samprukthau*
*Vāgartha Prathipathayê*
*Jagatah Pitharau Vandê*
*Pārvathi Parameswarau II*

## Around the courts

From Page 1

whole time post, the Chief Justice shall bear in mind that the relevant circumstances and shall not compromise the dignity of office of the sitting judge and shall try to preserve the independence of judiciary", the bench observed. Incidently Justice E Padmanabhan resigned the post of President of the State Consumer Disputes Redressal Commission, Pondichery during the pendency of the PIL before the high court.

❑ **Levy of water tax by the state government only after notification and consideration of objections;**

During the last week of June a Division Bench of the Andhra Pradesh High Court, comprising Mr. Justice Motilal B. Naik and Mr. Justice S. Ananda Reddy has made it clear that the authorities cannot demand water tax from farmers of Chilakaluripet mandal, Guntur district, unless the notifications under water tax are issued and the procedure followed.

These orders were issued while disposing of a writ petition filed by tne mandal unit of the Bharatiya Kisan Sangh represented by its President, Koka Ramachandra Rao. The Petitioner contended that they were irrigating land using water from Kuppagangivagu and Vogeru which were not irrigation sources maintained by the Government.

The Petitioner said the Government had to notify the sources and then indicate the proposed water tax and call for objections from the public before demanding water tax.

## Co-operative Society



N.S.S. Gupta

In the meeting of the Board of Directors held on 22.7.2002 Mr. N. S. Satyanarayana Gupta was elected, unopposed, as the President of Advocates Co-operative Society (L) Bangalore. Mr. Gupta succeeds Mr. Y. Vasudeva.

## UK court rejects plea

On July 23, a court in the United Kingdom has refused permission to a Chennai based lawyer R. Karuppan, to apply for judicial review relating to the decision of the Supreme Court of India holding that the year of birth of the former CJI, A. S. Anand, was 1936.

Justice Ousely of the High Court of Justice, Queens Bench Division, Administrative Court, in his order observed that "the application challenges a decision made on November 27, 2000 (by Supreme Court of India) is also unarguable. The Judge noted "this is a matter for the Indian courts or legislature. The former has conlcluded that the document dated September 4, 2000 from Mr. Behr giving a birth date in 1934 may not be genuine; it is not for this court to review that decision.

"The latter gave to the President of India power to resolve the issue of the age of the CJ and he has resolved it; it is not for this court to review his decision". He further said assuming, however, improbably that any of the defendants were amenable to judicial review in this matter, the material showed only that a birth date in 1934 was shown on a CLE form which would have been taken from an Inner Temple record which in fact showed the birth date in 1936.

The order noted that the letter of November 20, 2000 from the Bar Council's Chief Executive referred to the production of the original records at a meeting between the sub Treasurer and the Chief Justice. "It is plain either that the original records are correct and were wrongly copied or, if not, that the issue as to the correct year of birth, which is what this application is really about, cannot be resolved through those competing documents", the judge said and refused permission to apply for judicial review.

## Session for Women lawyers

The Centre for Human Resource Development had organised a session on "Ethics, Etiguette and Manners" for young women advocates on July 17 at Jayanagar, Bangalore. The centre also organised a session on "Effective Customer relations" on July 19.

## Post-retirement benefits

During the third week of July the Central Government has fixed a maximum amount of Rs. 1.98 lakhs pension for retired C J of India and Rs. 1.80 lakhs p.a. for retired judges of the Supreme Court with effect from January 1, 1996. Besides pension, a maximum of Rs. 3.50 lakhs has been provided for death-cum-retirement gratuity for retired CJIs and judges of the apex court.

The pension for retired Chief Justices of High Courts is Rs. 1.80 lakhs per annum and retired judges, Rs. 1.56 lakhs. As for family pension, 60% of the pension sanctioned for retired judges and CJIs of the apex court and high courts will be provided for the first seven years of retirement or death or up to 65 years of age and thereafter 30% of the sanctioned pension.

Commutation of pension @ 50% of the gross pension and leave encashment of 300 days of leave on full allowances have been allowed with effect from July 1, 1997.

They also have been granted Central Government Health Scheme Facilities in addition to any other facility extended by the respective State Governments.

## Kerala CM accepts CJ's proposals

At a highlevel conference held on July 20 Kerala Chief Minister A. K. Antony accepted the proposals made by the Chief Justice B. N. Srikrishna, for improving the facilities of the High Court as part of the steps to speed up the disposal of cases. The conference also decided to establish six more courts - two family courts, two special courts for trying abkari cases and two MACTs.

The conference was attended by Mr. Antony's Cabinet colleagues including Finance Minister K. Shankaranarayan, the Revenue and Law Minister K. M. Mani and other top Civil Service and Police officials from the side of the executive and Justice Cyriac Joseph, Justice K. S. Radhakrishnan, the Advocate General Ratna Singh, the Director General of Prosecutions P. V. Madhavan Nambiar and the Registrar of the High Court from the side of judiciary.

## New provisions to NI ACT

On July 16 the Government withdraw in the Lok Sabha a Bill to amend the Negotiable Instruments Act, which will be replaced by a fresh measure, following the cabinet desision to double the sentence period to two years for bouncing of cheques.

The Bill, which had been introduced in July 2001, was withdrawn by the Minister of State For Finance, Anant Geete, as the Government seeks to bring a fresh amendment incorporating certain new provisions. Apart from doubling the sentence, Government also proposes to fix a time limit of six months for speedy disposal of cases.

## Campus Watch

❑ The Bangalore University Academic Council in its extra-ordinary meeting held on July 10 approved semester system for Law Colleges coming under its jurisdiction from the academic year 2002-03. The Syllabus proposed by subject experts have also been approved.

❑ To prevent debacles like those faced by Enron adn Worldcom from occuring in India the existing legal frame work on corporate governance needs radicle reform, Dr. G. Madangopal Director NLSIU said. He was speaking at the National Roundtable organised at the School during the second week of July.

## Literary Union

❑ Under the joint auspices of the Literary Union and Department of Kannada and Culture Government of Karnataka, Bangalore, a Bharathanatya programme was provided on 18.7.2002 at the city unit of AAB by Smt. Sandhya Keshav Rao and Colleagues.

❑ On 25.7.2002 Sri Raghavendra Vijaya Drama Company, Waravi, presented a play "golden doll" (Chinnada Gombe) at the city Auditorium of AAB, under the auspices of the Union. Mr. T. N. Venkata Reddy, President of Literary Union, presided, Mr. K. N. Subba Reddy, Mr. A. Nagaraju, MLAs and Mr. K. S. Narayana Swamy, Vice-President, ITC Advant Ltd., were the chief guests.

# News Focus

❑ On 1.7.2002 Mr. Justice R. V. Raveendran, Judge, High Court of Karnataka addressed the members of AAB Magistrates Courts unit on the subject speedy disposal of pending cases and importance of Lok Adalath. Mr. Justice M. S. Rajendraprasad, Judge, High Court of Karnataka was present on the occassion as the Chief Guest. Mr. K. N. Subba Reddy, President AAB, presided.

❑ On 4.7.2002 Mr. Justice N. Santosh Hegde, Judge, Supreme Court of India addressed members of AAB High Court unit. Mr. Justice N. K. Jain, Chief Justice of the High Court of Karnataka, was the Chief Guest at the function which was presided over by Mr. K. N. Subba Reddy, President AAB.

❑ On 5.7.2002 AAB had organised a farewell function at the High Court unit in honour of Mr. Justice Mohamed Anwar, Scheduled to retire as a judge of Karnataka High Court on 8.7.2002.

❑ On 12.7.2002 the 206th Lok Adalath organised by the High Court Legal Services Committee was held under the guidance of Mr. Justice R. V. Raveendran, the Executive Chairman KSLS Authority, at the High Court unit.

On 12.7.2002 AAB felicitated Karnataka Lokayuktha Mr. Justice N. Venkatachala at the City Auditorium. Mr. K. N. Subba Reddy, President AAB welcomed the guest. Mr. Justice N. Venkatachala addressed the members on the working of the Karnataka Lokayuktha Act as an instrument to curb corruption in public institutions. He sought Co-operation of the people in this endeavour. Mr. H. N. Mariyappa, Secretary AAB thanked the guest.

❑ On 13.7.2002 M/s. Prime Events & Conferences had organised a seminar on Cyber Crime and Cyber law at Bangalore.

❑ On 15.7.2002 Prof. V. Narayana Swamy, addressed the members of AAB City unit on the subject amendments to Civil Procedure Code. Mr. H. M. Mariyappa Secretary of AAB presided.

❑ On 18.7.2002 Mr. Gulab Syed from Maharashtra provided a programme on acrobatic skills in the city civil court campus.Mr. A. R. Siddiqui, Principal Civil and Sessions Judge Bangalore and Mr. K. N. Subba Reddy, President AAB graced the programme.

❑ On 19.7.2002, 208the Lok Adalath organised by the High Court legal services committee was held at the High Court unit.

❑ Saturday the 20.7.2002 was a judicial working day for the High Court of Karnataka.

❑ On 23.7.2002, 210th Lok Adalat organised by the High Court legal services committee was held at the High Court unit

❑ On 23.7.2002, Mr. Justice P. Viswanatha Shetty, Judge, High Court of Karnataka addressed the members of AAB High Court unit on the Subject 'Law, Legal Aid, Lok Adalat and Role of Lawyers'. Mr. K. N. Subba Reddy, President AAB, presided.

❑ On 24.7.2002, 212th Lok Adalat organised by the High Court legal services committee was held at the High Court Unit.

❑ On 25.7.2002, 212th Lok Adalat organised by the High Court legal services committee was held at the High Court Unit.


❑ On 25.7.2002 Dr. Abraham Varghese, Joint National Co-ordinator, Swadeshi Jagaran Manch, addressed the members of AAB, High Court Unit, On the topic Indian Economic policy. Mr. K. N. Subba Reddy, president, AAB presided.

❑ On 26.7.2002 renowned cine-artist and MLC Mukhyamanthri Chandru addressed the members of AAB, City Unit on the subject professional humour. Mr. K. N. Subba Reddy, President AAB, presided.

❑ On 27.7.2002 Court holiday was declared in honour of Krishan Kant, Vice-President of India, who died of heart attack.

❑ 215the Lok Adalat organised by the High Court Legal Services Committee was held at the High Court Unit on 30.7.2002.

❑ On 30.7.2002 Mr. Justice M.F. Saldanha addressed the members of AAB, City Unit, on the topic "noise pollution and its killing effect on population". Mr. K. N. Subba Reddy, President, AAB presided.



K. C. Mehta and daughter Chandrika on pilgrimage to Mt. Kailash.



On the occassion of release of book titled Nityajeevanadalli Kanoonu (from L-R) Mr. N.S.S. Gupta, Mr. R. S. Rajaram, Mr. Justice V. Gopala Gowda, Mr. Justice (Rtd.) A. J. Sadashiva, Mr. Pradhan Gurudutt and Mr. S. R. Goutham.

## Books released

❑ On July 7 Mr. Justice V. Gopalagowda, Judge, High Court of Karnataka released a book "Nitya Jeevanadalli Kanoonu - Book 3" written by Mr. S. R. Gautam, Advocate. A memorable function jointly organised by Nava Karnataka Publications and Lahari Advocates Forum at Nayana auditorium was presided over by Mr. Justice (Rtd) A. J. Sadashiva. Dr. Pradhan Gurudatt from Mysore was the Chief Guest at the function and he introduced the book to the audience. Mr. G. Chandrashekaraiah, Secretary, Lahari Advocates Forum, welcomed the guests. Ms. Shubha Madhusudan proposed vote of thanks and compered the programme.

❑ On July 12, under the auspices of Karnataka Lekhakiyara Sangha (R.) a book titled "hasiru havala" (a traveller) written by Ms. Prabha Murthy, Advocate, was released in a function held at Kannada Sahitya Parishat, Bangalore.

## Retired

On 8.7. 2002 Mr. Justice Mohamed Anwar retired as a judge of Karnataka High Court. An affectionate farewell was given to Justice Mohamed Anwar at a special sitting of the full court of the High Court held on July 5, Mr. V.T. Rayaraddi, Chairman, KSBC in his farewell address recalled the services of Justice Anwar as a judge. In his reply Justice Anwar thanked the members of the Bar, brother judges and the court staff for extending co-operation in the discharge of his duties.

## Miscellany

❑ On 5.7.2002 Mr. B. S. Shivakumar, Advocate, opened his new law chamber under the name and style "Shivu Associates" at 676, 4th Block, 4th 'B' Cross Koramangala, Bangalore 34. Ph. (O) 5521256 Cell : 9845223942

❑ On 6.7.2002 a programme was held at Kanishka Hotel Auditorium, Bangalore in which Mr. C B Srinivasan and Mr. P. R. Mohan Rao, Advocates, Shared their experience of recent foreign travel with audience.

## Journalists Guild

Lahari Journalists Guild has organised a workshop on Saturday the September 14, 2002 at AAB Auditorium. Professional journalists will be speaking on the subject "Development of news reporting skill". Persons interested to participate as delegates may contact Mr. Sutradhara Ramaiah, Advocate, on phone : 6572287

> You don't become a criminal by breaking the law, but by getting found out.
>
> - Edmund Leach

## Obituary

We regret to report that :

❑ On 2.7.2002 P. Ramalingaiah, Advocate, passed away at Bangalore.

❑ On 11.7.2002 Saraswathibai, (52) an Advocate practising before Mayo Hall Unit passed away at Bangalore.

❑ On 19.7.2002 P.C. Ajjappa, Advocate, passed away at Bangalore.

Published by : Lahari Advocates Forum, No. 2980, "Laxmideep", 17th Cross, K. R. Road, BSK II Stage, Bangalore-560 070 and
Printed at : Parimala Mudranalaya, Mount Joy Extension, Hanumanthanagar, Bangalore-560 019. Phone : 6525516. Editor : K. Suryanarayana Rao

# ಲಹರಿ ಸಂವಾದ

ಸಂಪುಟ ೩ | ಶಕೆ : ಚಿತ್ರಭಾನು ಸಂವತ್ಸರ, ಮಾಸ : ಆಷಾಢ | ಸಂಚಿಕೆ ೪


## ಕಂಪಿನುಸಿರು

ಭಾವಗಳ ಬದುಕಿನಲಿ
ಬಳುವಳಿ ನೀನೆನಗೆ
ಬಿಡಲೊಪ್ಪದು ಮನ
ಕೊನೆಯವರೆಗೆ

ಅನುದಿನದ ಬದುಕಿನಲಿ
ಅನಿವಾರ್ಯ ನೀನೆನಗೆ
ಗುರಿ ತಲುಪುವಾಸೆ
ನಿನ್ನೊಂದಿಗೆ

ನಮಗಿರಲಿ ಸಹಜ ಬದುಕು
ನಾಳಿನಾಸೆಗಳೊಂದಿಗೆ
ನಮಗಿರಲಿ ಸಹಜ ಪ್ರೀತಿ
ಕಂಪಿನುಸಿರೊಂದಿಗೆ

ಸಿಟ್ಟು ತೊಲಗಲಿ
ಪ್ರತಿಷ್ಠೆ ಮಾಗಲಿ
ಪ್ರೀತಿ ಉಳಿಯಲಿ
ಬದುಕು ಇರುವವರೆಗೆ

– ರಮೇಶ್‌ಬಾಬು

## ಒಂದು ಆತ್ಮೀಯ ಸಮಾರಂಭ

ವಕೀಲ ಲೇಖಕರಾದ ಶ್ರೀ ಎಸ್.ಆರ್. ಗೌತಮ್‌ರವರ ನಿತ್ಯ ಜೀವನದಲ್ಲಿ ಕಾನೂನು – ೩ ಈ ಪುಸ್ತಕದ ಬಿಡುಗಡೆ ಸಮಾರಂಭವು ೭-೭-೦೨ ಭಾನುವಾರ ದಂದು ಲಹರಿ ವಕೀಲರ ವೇದಿಕೆ ಹಾಗೂ ನವಕರ್ನಾಟಕ ಪ್ರಕಾಶನ ಸಂಸ್ಥೆ ಜಂಟಿ ಆಶ್ರಯದಲ್ಲಿ ನಡೆಯಿತು. ಅದು ಪುಸ್ತಕದ ಒಂದು ಸಾಧಾರಣ ಬಿಡುಗಡೆಯ ಸಮಾರಂಭವಾಗದೆ ಒಂದು ಸುಂದರ, ಮಾತಿನ ಸರಮಾಲೆಯಾಗಿತ್ತೆಂದರೆ ಅತಿಶಯೋಕ್ತಿಯಲ್ಲ.

ಖ್ಯಾತ ಲೇಖಕ ಶ್ರೀ ಪ್ರಧಾನ ಗುರುದತ್ತರ ಮಾತುಗಳು ದೀರ್ಘವೆನಿಸಿದರೂ ಹೃದ್ಯವಾಗಿದ್ದವು. ಕಾನೂನು ಪಂಡಿತರ ನಡುವಿನ ಸಾಹಿತಿಯ ಮಾತಿನಲ್ಲಿ ಕಾನೂನು ಪ್ರೌಢಿಮೆಯೂ ಬೆರೆತಿತ್ತು. ಅಂದು ಆತ್ಮೀಯವಾಗಿ ಮಾತನಾಡಿದವರು ಇನ್ನಿಬ್ಬರು : ಉಚ್ಛ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಶ್ರೀ ಗೋಪಾಲ್ ಗೌಡ ಹಾಗೂ ಶ್ರೀ ಪಿ. ಜೆ. ಸದಾಶಿವ. ಸಮಾರಂಭದ ಪ್ರೇಕ್ಷಕ ವೃಂದದಲ್ಲಿ ಅಂದು ಹಾಜರಿದ್ದ ಖ್ಯಾತರು : ಉಚ್ಛ ನ್ಯಾಯಾಲಯದ ಮತ್ತೊಬ್ಬ ನ್ಯಾಯಮೂರ್ತಿ ಶ್ರೀ ಚಂದ್ರಶೇಖರಯ್ಯನವರು ಹಾಗೂ ನಮ್ಮ ಹಾ.ರಾ. ಅವರು. ಅಂದು ಇನ್ನೂ ಅನೇಕ ವಕೀಲಮಿತ್ರರು ಗೌತಮ್‌ರ ಅಭಿಮಾನಿಗಳು, ಬಂಧುಗಳು ಹಾಗೂ ನವಕರ್ನಾಟಕ ಪ್ರಕಾಶನದ ಆತ್ಮಶಕ್ತಿಯಾದ ಶ್ರೀ ರಾಜಾರಾಂ ಅವರುಗಳು ಹಾಜರಿದ್ದರು. ಸಮಾರಂಭಕ್ಕೆ ಕಳೆ ಕಟ್ಟಿದ್ದು ಸುಂದರವಾದ 'ನಯನ' ಸಭಾಂಗಣ (ಕನ್ನಡ ಭವನದ ಭಾಗ). ಒಟ್ಟಿನಲ್ಲಿ ನೆನಪಿನಲ್ಲಿ ಉಳಿಯುವಂತಹ ಚೊಕ್ಕ ಸಮಾರಂಭ. ವ್ಯವಸ್ಥಾಪಕರಿಗೆ, ಗೌತಮರಿಗೆ ಅಭಿನಂದನೆ.

ವರದಿ : ನಟರಾಜ್

### ಹನಿಗವನಗಳು

**ಕವನ**

ಬರೆಯಲು ಕುಳಿತರೆ ಕವನ
ಮನವೆಲ್ಲಾ ಕಗ್ಗತ್ತಲ ವನ
ಎಲ್ಲೆಲ್ಲೂ ಕಾನನವೇ ಕಾನನ
ಏನ ಮಾಡಲಿ ನಾ?
ದಾರಿ ತೋರೆಯಾ? ಹೇ ದೇವ

ಭವಾನಿ ವೇಣುಗೋಪಾಲ್

## ಲೋಕಾಯುಕ್ತ ಕಾಯಿದೆ ಬಗ್ಗೆ

ದಿನಾಂಕ ೧೨-೭-೦೨ರಂದು ಮಧ್ಯಾಹ್ನ ೨ ಗಂಟೆಯ ವೇಳೆಯಲ್ಲಿ ವಕೀಲರ ಸಂಘದ ಆಶ್ರಯದಲ್ಲಿ, ನಗರ ಘಟಕದ ಸಭಾಂಗಣದಲ್ಲಿ ಮತ್ತು ಸಂಘದ ಅಧ್ಯಕ್ಷ ಸುಬ್ಬಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯದ ಲೋಕಾಯುಕ್ತರಾದ ಶ್ರೀ ನ್ಯಾ|| ವೆಂಕಟಾಚಲರವರು ಲೋಕಾಯುಕ್ತ ಕಾಯಿದೆ ಬಗ್ಗೆ ಮಾತನಾಡಿದರು.

ಶ್ರೀ ರೆಡ್ಡಿರವರು ಲೋಕಾಯುಕ್ತರ ವ್ಯಕ್ತಿತ್ವ, ಗುಣ, ಪರಿಚಯ, ಕಾನೂನು ಕ್ಷೇತ್ರದಲ್ಲಿ ಅವರ ಹಿರಿಮೆ,, ಅವರೊಡನೆ ರೆಡ್ಡಿಯವರ ಒಡನಾಟ ಮುಂತಾದ ವಿಚಾರಗಳನ್ನು ಸವಿಸ್ತಾರವಾಗಿ ವಿವರಿಸಿದರು.

ಲೋಕಾಯುಕ್ತರು ಮಾತನಾಡುತ್ತಾ ತಮ್ಮ ಭಾಷಣದ ಮೊದಲರ್ಧ ಭಾಗವನ್ನು ಭ್ರಷ್ಟಾಚಾರದ ಹುಟ್ಟು, ಬೆಳವಣಿಗೆ, ವಿಶ್ವವ್ಯಾಪಿ ಹಬ್ಬಿರುವ ವಿಧಾನ, ಇದರಲ್ಲಿ ಯಾವ ಯಾವ ದೇಶಗಳ ಪಾಲು ಎಷ್ಟು, ಈ ಭ್ರಷ್ಟಾಚಾರ ತಡೆಗಟ್ಟುವತ್ತ ಯಾವ ದೇಶ ಮೊದಲು ಮುಂದಡಿ ಇಟ್ಟಿತು, ಈ ಭ್ರಷ್ಟಾಚಾರದ ಪಿಡುಗನ್ನು ತೊಡೆದು ಹಾಕಲು ವಿಶ್ವವ್ಯಾಪಿ ಹಮ್ಮಿಕೊಂಡಿರುವ ಯೋಜನೆಗಳು ಮತ್ತು ಇದರ ಫಲಪ್ರದವೆಷ್ಟೆಂಬುದನ್ನು ವಿವರಿಸುತ್ತಾ ನಮ್ಮ ದೇಶದಲ್ಲಿ ಭ್ರಷ್ಟಾಚಾರದ ಹುಟ್ಟು ಎಷ್ಟು ಮಟ್ಟಿಗೆ ಬೆಳೆದಿದೆ, ಇದು ಸರ್ವರಂಗಗಳಲ್ಲೂ ವ್ಯಾಪಿಸಿ ತೊಡೆದುಹಾಕಲು ಸಾಧ್ಯವೇ ಇಲ್ಲವೇನೋ ಎನ್ನುವಷ್ಟರ ಮಟ್ಟಿಗೆ ಬೃಹದಾಕಾರವಾಗಿ ಬೆಳೆದು ಇದು ದಿನನಿತ್ಯದ ಮಾನವರ ಜೀವನದ ಒಂದು ಅವಿಭಾಜ್ಯ ಅಂಗವೇನೋ ಎಂಬಂತಾಗಿದೆ ಎಂದರು. ಲಂಚಗುಳಿತನ, ಭ್ರಷ್ಟಾಚಾರ ಯಾವ ಕ್ಷೇತ್ರಕ್ಕೂ ಸೀಮಿತವಾಗಿಲ್ಲ ಎಲ್ಲ ರಂಗಗಳಲ್ಲೂ ತಾಂಡವವಾಡುತ್ತಿದೆ. ಇದನ್ನು ತೊಡೆಯುವ ಯತ್ನದಲ್ಲಿ ಹಲವಾರು ಮಂದಿ ಬಂದು ಹೋಗಿದ್ದಾರೆ. ನಾನು ಹಿಂದಿನ ವಿಚಾರಗಳನ್ನು ಎತ್ತುವುದಿಲ್ಲ, ನಾನು ಈ ಸ್ಥಾನದಲ್ಲಿರುವವರೆಗೆ ಲಂಚ, ಭ್ರಷ್ಟಾಚಾರದ ವಿರುದ್ಧ ಸಮರ ಸಾರುವುದು ದಿಟ. ಇದರಲ್ಲಿ ಯಶಸ್ವಿಯಾಗುವ ನಂಬಿಕೆ ನನಗಿದೆ. ಇದಕ್ಕೆ ನಿಮ್ಮಂಥ ಬುದ್ಧಿಜೀವಿಗಳ, ಎಲ್ಲ ವರ್ಗಗಳ ಜನರ ಸಹಕಾರ ಅಗತ್ಯವೆಂದರು.

ಲಂಚ ಕೊಡುವವರು ಇರುವವರೆಗೆ ಪಡೆಯುವವರು ಇದ್ದೇ ಇರುತ್ತಾರೆ. ಈ ಹಂತದಲ್ಲಿ ಜನ ಜಾಗೃತರಾಗಿ ದೃಢಮನಸ್ಕರಾಗಬೇಕು. ಭ್ರಷ್ಟಾಚಾರವನ್ನು ನಿರ್ಮೂಲನ ಮಾಡಲು ಮನಸ್ಸನ್ನು ಒಂದು ಅತ್ಯುತ್ತಮ ಹರಿತವಾದ ಆಯುಧವನ್ನಾಗಿ ಮಾಡಿಕೊಳ್ಳಬೇಕು. ನನಗೆ ಯಾವುದೇ ಆಸೆ, ಆಮಿಷಗಳ ಬಲಹೀನತೆ ಇಲ್ಲ, ಯಾವ ಅಧಿಕಾರ ದಾಹದ ಇಚ್ಛೆಯೂ ಇಲ್ಲ. ಅಧಿಕಾರ ಇರುವವರೆಗೆ ಸಮಾಜಕ್ಕೆ ಕಪಟರಹಿತ , ನಿಷ್ಕಳಂಕ, ದೃಢ ಹಾಗೂ ಅಚಲವಾದ ಸೇವೆ ಸಲ್ಲಿಸುವುದೇ ನನ್ನ ಧ್ಯೇಯ, ತಮಗೆ ಎಲ್ಲೇ ಲಂಚ, ಭ್ರಷ್ಟಾಚಾರಗಳ ಬಗ್ಗೆ ಮಾಹಿತಿ ದೊರೆತಲ್ಲಿ ನಿಖರವಾಗಿ ತಕ್ಷಣವೇ ನನ್ನನ್ನು ಅಥವಾ ನಮ್ಮ ಲೋಕಾಯುಕ್ತ ತಂಡವನ್ನು ಸಂಪರ್ಕಿಸಿ ಅದನ್ನು ತಡೆಗಟ್ಟುವಲ್ಲಿ ಸಹಕರಿಸಿ ಎಂದು ವಿನಂತಿಸಿದರು.

ಲೋಕಾಯುಕ್ತ ಕಾಯಿದೆ ಬಗ್ಗೆ ಮಾತನಾಡುತ್ತಾ ಸರ್ಕಾರವು ಕಾಯಿದೆ ತಂದ ಸಂದರ್ಭ, ಉದ್ದೇಶ, ಅದರ ವ್ಯಾಪ್ತಿ, ಇತಿಮಿತಿಗಳು ಲೋಕಾಯುಕ್ತಮಿತಿಯೊಳಪಡುವ ಇಲಾಖೆಗಳು, ಇದರ ಕಾರ್ಯವಿಧಾನಗಳ ಬಗ್ಗೆ ಸವಿಸ್ತಾರವಾಗಿ ವಿವರಿಸುತ್ತಾ ಅದಕ್ಕೆ ಹಲವಾರು ದೃಷ್ಟಾಂತಗಳನ್ನು ನೀಡುತ್ತಾ ಸಭಿಕರ ಗಮನ ಸೆಳೆದು ಹಲವಾರು ಸಭಿಕರ ಪ್ರಶ್ನೆಗಳಿಗೆ ಸಮಂಜಸ ಉತ್ತರ ನೀಡುವುದರೊಂದಿಗೆ ಸಂಘ ನೀಡಿದ ಸನ್ಮಾನವನ್ನು ಸ್ವೀಕರಿಸಿದರು. ಸಭೆಗೆ ಸಭಿಕರ ಮಹಾಪೂರವೇ ಹರಿದಿತ್ತು ಮತ್ತು ಲೋಕಾಯುಕ್ತರ ಪ್ರತಿಯೊಂದು ನುಡಿಯನ್ನು ತದೇಕಚಿತ್ತದಿಂದ ಆಲಿಸುತ್ತಿತ್ತು.

ಸಂಘದ ಕಾರ್ಯದರ್ಶಿಗಳಾದ ಶ್ರೀ ಮರಿಯಪ್ಪನವರು ವಂದನಾರ್ಪಣೆ ಮಾಡುವುದರೊಂದಿಗೆ ಸಭೆ ಮುಕ್ತಾಯಗೊಂಡಿತು.

ವರದಿ : ಎಸ್. ಗೋಪಾಲ್

## ಭರತನಾಟ್ಯ ಕಾರ್ಯಕ್ರಮ

ದಿನಾಂಕ ೧೮.೦೭.೨೦೦೨ರಂದು ಮಧ್ಯಾಹ್ನ ಎರಡು ಗಂಟೆಗೆ ಬೆಂಗಳೂರು ವಕೀಲರ ಸಂಘದ ನಗರ ಘಟಕದ ಸಭಾಂಗಣದಲ್ಲಿ ವಕೀಲರ ಸಾಹಿತ್ಯಕೂಟದ ಆಶ್ರಯದಲ್ಲಿ ಅದರ ಅಧ್ಯಕ್ಷರಾದ ಶ್ರೀ ಟಿ. ಎಂ. ವೆಂಕಟರೆಡ್ಡಿರವರ ಅಧ್ಯಕ್ಷತೆಯಲ್ಲಿ ಸಾಂಸ್ಕೃತಿಕ ಸೌರಭದ ಅಂಗವಾಗಿ ಶ್ರೀಮತಿ ಸಂಧ್ಯಾ ಕೇಶವರಾವ್‌ರವರಿಂದ ಭರತನಾಟ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಹೈಕೋರ್ಟಿನ ನ್ಯಾ|| ರಂಗವಿಠಲಾಚಾರ್ ಮತ್ತು ಸಂಸದರಾದ ಪುಟ್ಟಸ್ವಾಮಿಗೌಡರು ಹಾಗೂ ವಕೀಲರ ಸಂಘದ ಅಧ್ಯಕ್ಷರಾದ ಶ್ರೀ ಸುಬ್ಬಾರೆಡ್ಡಿರವರು ಆಗಮಿಸಿದ್ದರು. ಸಾಹಿತ್ಯಕೂಟದ ಇತರ ಪದಾಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಸಾಹಿತ್ಯಕೂಟದ ಕಾರ್ಯದರ್ಶಿ ನಾರಾಯಣ್‌ರವರ ಉತ್ತಮ ನಿರೂಪಣೆ ಮತ್ತು ಸ್ವಾಗತ ಭಾಷಣದೊಂದಿಗೆ ಆರಂಭಗೊಂಡ ಸಭೆಯಲ್ಲಿ ಸಂಸದರಾದ ಶ್ರೀ ಪುಟ್ಟಸ್ವಾಮಿಗೌಡರು ಮಾತನಾಡುತ್ತಾ ಬೆಂಗಳೂರಿನ ಲಿಟರರಿ ಯೂನಿಯನ್‌ನ ಹುಟ್ಟು, ಬೆಳವಣಿಗೆ, ಅಸ್ತಿತ್ವ ಮತ್ತು ಅದರ ಅಗಾಧ ಸಾಧನೆಗಳ ಬಗ್ಗೆ ಪ್ರಶಂಸೆ ವ್ಯಕ್ತಪಡಿಸುತ್ತಾ ಇದರ ಎಲ್ಲಾ ಉತ್ತಮ ಕಾರ್ಯಕ್ರಮಗಳಿಗೆ ಉತ್ತಮ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಹೈ. ನ್ಯಾ|| ಶ್ರೀ ರಂಗವಿಠಲಾಚಾರ್‌ರವರು ಮಾತನಾಡುತ್ತಾ ಮನುಷ್ಯ–ಮನಸ್ಸುಗಳನ್ನು ಭೇದಭಾವಗಳಿಲ್ಲದೆ ಬೆಸೆಯುವ ಮತ್ತು ತಲ್ಲೀನತೆಯಿಂದ ತನ್ಮಯಗೊಳಿಸುವ ಏಕೈಕ ಸಾಧನೆ ಎಂದರೆ 'ಕಲೆ' ಎಂದು ತಿಳಿಸುತ್ತಾ ಈ ಕಲೆಯ ಹುಟ್ಟು, ಬೆಳವಣಿಗೆ, ಅದರ ಪ್ರಾಕಾರಗಳು, ಅವು ಮಾನವನ ಜೀವನದಲ್ಲಿ ನೆಲೆಗೊಂಡಿರುವ ಅಂಶಗಳನ್ನು ಒತ್ತಿ ಹೇಳುತ್ತಾ ವಿಶ್ವದಲ್ಲಿ ಕಲೆಗೆ ಮಾರು ಹೋಗದ ವ್ಯಕ್ತಿಯೇ ಇಲ್ಲವೆಂದರು. ಭರತನಾಟ್ಯವೂ ಈ ಕಲೆಯ ಒಂದು ಭಾಗ, ಅವಿರತ ಪರಿಶ್ರಮ, ಸಾಧನೆಯಿಂದ ಸಿದ್ಧಿಸುವ, ತನ್ಮೂಲಕ ಜನಾಕರ್ಷಣೆಗೊಂಡಿರುವ ಕಲೆ, ಇದು ಇತಿಹಾಸದಲ್ಲಿ ಹಲವಾರು ರಾಜಾಶ್ರಯದಲ್ಲಿ ಬೆಳೆದಿದೆ ಮತ್ತು ತನ್ನ ಬೆಳವಣಿಗೆಯಲ್ಲಿ ಹಲವಾರು ಏರಿಳಿತಗಳನ್ನು ಕಂಡಿದೆ ಎಂದರು.

ವಕೀಲರ ಸಂಘದ ಅಧ್ಯಕ್ಷರಾದ ಸುಬ್ಬಾರೆಡ್ಡಿಯವರು ಮಾತನಾಡಿ ಪುಟ್ಟಸ್ವಾಮಿ ಗೌಡರೊಡನೆ ಬಾಂಧವ್ಯ, ಅವರಿಂದ ಸಂಘಕ್ಕೆ ಕೊಡುಗೆಗಳ ಬಗ್ಗೆ ವಿವರಿಸುತ್ತಾ, ನ್ಯಾಯಮೂರ್ತಿಗಳ ಸಾಧನೆಯನ್ನು ಶ್ಲಾಘಿಸಿದರು. ಅತಿಥಿಗಳಿಗೆ ಸನ್ಮಾನವಾದ ನಂತರ ವಂದನಾರ್ಪಣೆ ಖಜಾಂಚಿ ಹೆಗಡೆರವರಿಂದ. ನಂತರ ಭರತನಾಟ್ಯ ಕಾರ್ಯಕ್ರಮ ಆರಂಭಗೊಂಡಿತು.

ಶ್ರೀಮತಿ ಸಂಧ್ಯಾ ಕೇಶವರಾವ್‌ರವರು ಭರತನಾಟ್ಯದ ತಮ್ಮ ಅಭೂತಪೂರ್ವ ಅಭಿನಯ ಹಾಗೂ ವಿವಿಧ ಭಂಗಿಗಳಿಂದ ಸಭಿಕರನ್ನು ರಂಜಿಸಿದರು.

ವರದಿ : ಎಸ್. ಗೋಪಾಲ್

## ವೃತ್ತಿಯಲ್ಲಿ ಹಾಸ್ಯ

ದಿನಾಂಕ ೨೬.೦೭.೨೦೦೨ರಂದು ಮಧ್ಯಾಹ್ನ ೪ ಗಂಟೆಗೆ ಬೆಂಗಳೂರು ವಕೀಲರ ಸಂಘದ ಆಶ್ರಯ ದಲ್ಲಿ ಹಾಗೂ ಅದರ ನಗರ ಘಟಕದ ಸಭಾಂಗಣ ದಲ್ಲಿ ಅಧ್ಯಕ್ಷರಾದ ಶ್ರೀ ಸುಬ್ಬಾರೆಡ್ಡಿಯವರ ಅಧ್ಯಕ್ಷತೆ ಯಲ್ಲಿ ಖ್ಯಾತ ಕನ್ನಡ ಚಲನಚಿತ್ರ ನಟರು ಹಾಗೂ ಶಾಸಕರಾದ ಶ್ರೀ ಮುಖ್ಯಮಂತ್ರಿ ಚಂದ್ರುರವರು "ವೃತ್ತಿಯಲ್ಲಿ ಹಾಸ್ಯ" ಎಂಬ ವಿಚಾರವಾಗಿ ಮಾತ ನಾಡಿದರು. ಸಭೆಯ ವೇದಿಕೆಯಲ್ಲಿ ಸಂಘದ ಇತರ ಪದಾಧಿಕಾರಿಗಳು ಹಾಜರಿದ್ದರು.

ಶ್ರೀ ಸುಬ್ಬಾರೆಡ್ಡಿಯವರು ಸಭೆಗೆ ಮುಖ್ಯಮಂತ್ರಿ ಚಂದ್ರುರವರನ್ನು ಪರಿಚಯಿಸುತ್ತಾ ಅವರ ವ್ಯಕ್ತಿತ್ವ, ಬೆಳವಣಿಗೆ, ವಿವಿಧ ಕ್ಷೇತ್ರಗಳಲ್ಲಿನ ಸಾಧನೆ ಮತ್ತು ಚಲನಚಿತ್ರರಂಗಕ್ಕೆ ಅವರ ಕೊಡುಗೆ, ರಾಜಕೀಯ ರಂಗದ ಅವರ ಬೆಳವಣಿಗೆ ಮತ್ತು ಹಲವಾರು ಕ್ಷೇತ್ರಗಳಲ್ಲಿ ಅವರ ದುಡಿಮೆ ಬಗ್ಗೆ ವಿವರಿಸುತ್ತಾ ಅವರ ವ್ಯಕ್ತಿತ್ವಕ್ಕೆ ಮೆರುಗನ್ನು ಚೆಲ್ಲಿದರು.

ಎಂತಹ ಗಂಭೀರ ಸಭೆ, ಸಂದರ್ಭಗಳಲ್ಲೂ ತಮ್ಮ ಅಪ್ರತಿಮ ಹಾಸ್ಯಪ್ರತಿಭೆಯಿಂದ ಸಭಿಕರನ್ನು, ಸಾರ್ವಜನಿಕರನ್ನು ತನ್ನತ್ತ ಆಕರ್ಷಿಸುವ ಸಮರ್ಥ ವ್ಯಕ್ತಿತ್ವವುಳ್ಳ ಶ್ರೀ ಮುಖ್ಯಮಂತ್ರಿ ಚಂದ್ರುರವರು ಯಥಾಶೈಲಿಯಲ್ಲಿ ತಮ್ಮ ಹಾಸ್ಯಪ್ರಜ್ಞೆ ತೋರಿ "ಜೀವನ–ವೃತ್ತಿ–ಹಾಸ್ಯ" ಈ ಸುಂದರ ಪದಗಳ ಕ್ರೋಢೀಕರಣಗೊಳಿಸಿ ಮಂಥನ ಮಾಡಿ ಮನುಷ್ಯನ ದೈನಂದಿನ ಜೀವನದ ಚಟುವಟಿಕೆಗಳ ರೂಪ ಕೊಟ್ಟು ತಮ್ಮ ಹಾಸ್ಯಕ್ಕೆ ನೈಪುಣ್ಯತೆಯ ಮಿಶ್ರಣ ಮಾಡಿ ಸಭೆಯಲ್ಲಿ ನಗೆಬುಗ್ಗೆಯ ನುಡಿಮುತ್ತುಗಳನ್ನು ಚಿಮ್ಮುತ್ತಾ ಸಭಿಕರ ಇಹ ಮರೆಸಿ ತಮ್ಮ ಹಾಸ್ಯಸಾಮ್ರಾಜ್ಯಕ್ಕೆ ಸೆಳೆದು ಸರ್ವರನ್ನೂ ಹಾಸ್ಯಲೋಕದಲ್ಲಿ ತೇಲಾಡುವಂತೆ ಮಾಡಿದರು. ಹಾಸ್ಯ ಮಾನವ ದೈನಂದಿನ ಜೀವನದ ಒಂದು ಭಾಗವಾಗಬೇಕು, ಆಗಲೇ ಪ್ರತಿಯೊಬ್ಬರ ಜೀವನ ಅರ್ಥಪೂರ್ಣವೆಂದರು.

ನಂತರ ಗಂಭೀರವಾಗಿ ಮಾತನಾಡುತ್ತಾ ವೃತ್ತಿ – ಹಾಸ್ಯ – ಜೀವನ ಪದಗಳ ಅರ್ಥ, ಮಹತ್ವ ವಿವರಿಸುತ್ತ ಪ್ರಜಾಪ್ರಭುತ್ವದ ಮಹತ್ವ, ಅದನ್ನೊಳಗೊಂಡಿರುವ ಭಾರತದ ಹಿರಿಮೆ ಸಾಧನೆ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮುಂತಾದವುಗಳ ಮಹತ್ವ, ಅವುಗಳ ವೃತ್ತಿಪರರ ಜವಾಬ್ದಾರಿ ಕರ್ತವ್ಯಗಳು ಮುಂತಾದವುಗಳ ಬಗ್ಗೆ ಸೂಚ್ಯವಾಗಿ ತಿಳಿಸುತ್ತಾ ಎಲ್ಲ ರಂಗಗಳಿಗೂ ಶ್ರೇಷ್ಠವಾದದ್ದು ನ್ಯಾಯಾಂಗ ಹಾಗೂ ಇದರಲ್ಲಿ ಕರ್ತವ್ಯ ನಿರ್ವಹಿಸುವವರು. ಅತ್ಯಂತ ಪ್ರಬುದ್ಧರು, ಬುದ್ಧಿಜೀವಿಗಳು ಇವರ ಮೇಲೆ ಜವಾಬ್ದಾರಿಯ ಹೊರೆ ಹೆಚ್ಚಿದೆ ಎನ್ನುತ್ತಾ ಬುದ್ಧಿ, ಮೇಧಾಶಕ್ತಿಗಳ ಸಾಧನೆಗೈದ ಮಹನೀಯರಲ್ಲಿ ತಾನು ಕಿರಿಯನೆಂದು ವಿವರಿಸುತ್ತಾ ತಮ್ಮ ವಿನಯ, ವಿಧೇಯತೆಯ ಹಿರಿಮೆಯನ್ನು ಪ್ರದರ್ಶಿಸಿದರು.

ಸಂಘದ ಕಾರ್ಯದರ್ಶಿಗಳಾದ ಶ್ರೀ ಮರಿಯಪ್ಪನವರು ವಂದನಾರ್ಪಣೆ ಮಾಡುವುದರೊಂದಿಗೆ ಸಭೆ ಮುಕ್ತಾಯಗೊಂಡಿತು.

ವರದಿ : ಎಸ್. ಗೋಪಾಲ್

## ವಕೀಲರ ಸಂಘದ ಸರ್ವಸದಸ್ಯರ ಸಭೆ

ದಿನಾಂಕ ೯.೭.೨೦೦೨ರಂದು ಮಧ್ಯಾಹ್ನ ೧.೪೫ ಗಂಟೆಗೆ ಬೆಂಗಳೂರು ವಕೀಲರ ಸಂಘದ ನಗರ ಘಟಕದ ಸಭಾಂಗಣದಲ್ಲಿ, ಸಂಘದ ಅಧ್ಯಕ್ಷರಾದ ಶ್ರೀ ಸುಬ್ಬಾರೆಡ್ಡಿಯವರು ತಮ್ಮ ವಿಶೇಷ ಅಧಿಕಾರವನ್ನು ಚಲಾಯಿಸಿ ಸಂಘದ ಸರ್ವಸದಸ್ಯರ ಸಭೆಯನ್ನು ಕರೆದಿದ್ದರು. ಸಭೆಯಲ್ಲಿ ಸಂಘದ ಇತರ ಪದಾಧಿಕಾರಿಗಳು ಹಾಜರಿದ್ದರು. ಸಭೆಯಲ್ಲಿ ಸಂಘದ ಸದಸ್ಯರಿಂದ ಸಂಘಕ್ಕೆ ಬರಬೇಕಾದ ಸದಸ್ಯತ್ವ ಶುಲ್ಕ ಬಾಕಿ ವಸೂಲಿಯ ಬಗ್ಗೆ ಮತ್ತು ಬೆಂಗಳೂರಿನ ಎಲ್ಲಾ ನ್ಯಾಯಾಲಯ ಆವರಣದಲ್ಲಿ ವಾಹನ ನಿಲುಗಡೆ ಸಮಸ್ಯೆಗಳ ಬಗ್ಗೆ ಮತ್ತು ಅವುಗಳ ಪರಿಹಾರೋಪಾಯದ ಬಗ್ಗೆ ಚರ್ಚಿಸಲಾಯಿತು. ಹಾಗೂ ಈ ಸಂಬಂಧವಾಗಿ ಹಲವಾರು ಸದಸ್ಯಮಿತ್ರರಿಂದ ಸಲಹೆಗಳನ್ನು ಸ್ವೀಕರಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಸುಬ್ಬಾರೆಡ್ಡಿಯವರು ಮಾತನಾಡುತ್ತಾ ಸಂಘದ ಸದಸ್ಯತ್ವದ ಶುಲ್ಕ ಬಾಕಿ ಉಳಿಸಿಕೊಳ್ಳುವುದರಲ್ಲಿ ಹಿರಿಯ ವಕೀಲ ಸದಸ್ಯರು ಮುಂದಿದ್ದಾರೆ. ಶುಲ್ಕ ಕಟ್ಟುವುದರಲ್ಲಿ ಕಿರಿಯ ವಕೀಲರು ಮುಂದಿದ್ದಾರೆ ಎಂದರು. ಹಾಗೆಯೇ ಹಲವಾರು ಸದಸ್ಯರ ಅಭಿಪ್ರಾಯದ ಮೇರೆಗೆ ಬಾಕಿ ಸದಸ್ಯತ್ವ ಹಣ ಕಟ್ಟಲು ರಿಯಾಯಿತಿ ತೋರಿಸಿ ಇದನ್ನು ಆಗಸ್ಟ್ ೧೫ರೊಳಗಾಗಿ ಸದುಪಯೋಗ ಪಡೆಸಿಕೊಂಡು, ಕಟ್ಟಬೇಕೆಂದು ತಿಳಿಸಲಾಯಿತು. ವಾಹನ ನಿಲ್ಲಿಸುವ ವ್ಯವಸ್ಥೆಯ ಕುರಿತು ವಕೀಲರ ವಾಹನಗಳಿಗೆ ಗುರುತಿನ ಚೀಟಿ ನೀಡುವ ವಿಚಾರ ಚಿಂತಿಸುತ್ತಿದ್ದೇವೆ ಎಂದರು. ಈ ಎರಡೂ ವಿಚಾರಗಳನ್ನು ಅಂಗೀಕರಿಸುವುದ ರೊಂದಿಗೆ ಸಭೆ ಮುಕ್ತಾಯಗೊಂಡಿತು.

**ವರದಿ : ಎಸ್. ಗೋಪಾಲ್**

## ಓದುಗರ ಪತ್ರ

ಇವರಿಗೆ,

ದಿನಾಂಕ :೧೦.೦೭.೨೦೦೨

ಮಾನ್ಯ ಪೊಲೀಸ್ ಆಯುಕ್ತರು
ಪೊಲೀಸ್ ಇಲಾಖೆ
ಬೆಂಗಳೂರು.

ಮಾನ್ಯರೆ,

ವಿಷಯ : ಬೆಂಗಳೂರಿನ ಸೆಂಟ್‌ಮಾರ್ಕ್ ರಸ್ತೆಯ ೧೮೦ ಪ್ರೂಫ್ ಹೋಟೆಲ್ ನಲ್ಲಿ ಈ ದಿನ ರಾತ್ರಿ ದಿ ವಜಿನಾ ಮಾನೊಲೊಗ್ (The Vagina Monologue) ಹೆಸರಿನಲ್ಲಿ ಕಿಮಯ ಪ್ರೊಡಕ್ಷನ್‌ರವರು ಅನಧಿಕೃತವಾಗಿ ಮಹಿಳೆಯರ ಹೆಸರಿನಲ್ಲಿ ಕಾನೂನು ಬಾಹಿರ ಮಹಿಳಾ ಚಟುವಟಿಕೆಯನ್ನು ನಡೆಸುತ್ತಿರುವ ಬಗ್ಗೆ

ಕಿಮಯ ಪ್ರೊಡಕ್ಷನ್ಸ್‌ರವರು ಈ ದಿನ ರಾತ್ರಿ ೧೦.೦೭.೨೦೦೨ ೯.೧೫ಕ್ಕೆ ಸೆಂಟ್ ಮಾರ್ಕ್ ರಸ್ತೆಯಲ್ಲಿರುವ ೧೮೦ ಪ್ರೂಫ್ ಹೋಟೆಲ್‌ನಲ್ಲಿ ಮಹಿಳೆಯರ ಹೆಸರಿನಲ್ಲಿ ದಿ ವಜಿನಾ ಮಾನೊಲೊಗ್ (The Vagina Monologue) ಎಂಬುವ ಚಟುವಟಿಕೆಯನ್ನು ಹಮ್ಮಿಕೊಂಡಿರುತ್ತಾರೆ. ಈ ಚಟುವಟಿಕೆ ಪ್ರವೇಶಪತ್ರ ಪಡೆದವರಿಗೆ ಮಾತ್ರ ಅವಕಾಶವಿದ್ದು ಇದೊಂದು ಮಹಿಳೆಯರ ಹೆಸರಿನಲ್ಲಿ ಮಹಿಳೆಯರನ್ನು ಶೋಷಣೆ ಮಾಡುವಂತಹ ಕ್ರಮವಾಗಿರುತ್ತದೆ. ಈ ದಿನ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಬೆಂಗಳೂರು ಟೈಮ್ಸ್ ವಿಭಾಗದಲ್ಲಿ ಮುಖಪುಟದಲ್ಲಿ ನೋ ಹೋಲ್ಡ್ಸ್ ಬಾರ್ಡ್ (No Holds Barred) ತಲೆಬರಹದ ಅಡಿಯಲ್ಲಿ ಲೇಖನವು ಪ್ರಕಟವಾಗಿದ್ದು, ಈ ಲೇಖನದ ಮೂಲಕ ಅಮಾಯಕರನ್ನು ಈ ಚಟುವಟಿಕೆಗೆ ಎಳೆಯುವಂತಹ ಪ್ರಯತ್ನವನ್ನು ಮಾಡಲಾಗಿರುತ್ತದೆ. ಒಟ್ಟಾರೆ ಈ ಲೇಖನ ಅನೇಕ ಅನುಮಾನಗಳಿಗೆ ಅವಕಾಶ ಮಾಡಿಕೊಟ್ಟಿದ್ದು, ಕಾನೂನು ಮತ್ತು ಸಮಾಜದ ಆರೋಗ್ಯಕರ ವಾತಾವರಣದ ಹಿನ್ನೆಲೆಯಲ್ಲಿ ಇಂತಹ ಅಕ್ರಮ ಚಟುವಟಿಕೆಗಳನ್ನು ತಡೆಯುವುದು ಅನಿವಾರ್ಯವಾಗಿರುತ್ತದೆ.

ಇವರು ಈ ಕಾರ್ಯಕ್ರಮವನ್ನು ಸ್ಥಳೀಯ ಪ್ರಾಧಿಕಾರದ ಅಥವಾ ಪೊಲೀಸ್ ಇಲಾಖೆಯ ಅನುಮತಿ ಇಲ್ಲದೆ ನಡೆಸುತ್ತಿರುವುದಾಗಿ ತಿಳಿದು ಬಂದಿರುತ್ತದೆ ಮತ್ತು ಇಡೀ ಲೇಖನ ಲೈಂಗಿಕ ಅಪರಾಧಗಳಿಗೆ ಉತ್ತೇಜನ ನೀಡುವ ರೀತಿಯಲ್ಲಿ ಕಂಡುಬಂದಿರುತ್ತದೆ. ಆದಕಾರಣ ಸಾರ್ವಜನಿಕ ಹಿತದೃಷ್ಟಿಯಿಂದ ಈ ಕೂಡಲೇ ಇವರ ಮೇಲೆ ಕಾನೂನು ಕ್ರಮ ಕೈಗೊಂಡು ಈ ರಾತ್ರಿ ಇರುವಂತಹ ಉದ್ದೇಶಿತ ಚಟುವಟಿಕೆಯನ್ನು ತಡೆಹಿಡಿಯಬೇಕಾಗಿ ಮತ್ತು **ಸೂಕ್ತ** ತನಿಖೆಯನ್ನು ಕೈಗೊಳ್ಳಬೇಕಾಗಿ ಕೋರುತ್ತೇವೆ.

ಇತಿ ವಂದನೆಗಳೊಂದಿಗೆ
**ರಮೇಶ್‌ಬಾಬು**

**(ಇದು ಲೇಖಕರ ವೈಯಕ್ತಿಕ ಅಭಿಪ್ರಾಯ ಮಾತ್ರ)**

## ಹಾಸ್ಯ

☐ ನ್ಯಾಯಾಧೀಶರು ಕುಪಿತರಾಗಿ : ''ಅಲ್ರೀ ವಕೀಲರೇ Amended C.P.C. ಓದ್ರೀ, Written Statement ಹಾಕೋಕ್ಕೆ ಮೂವತ್ತು ದಿನಗಳಿಗಿಂತ ಹೆಚ್ಚು ಕಾಲಾವಕಾಶ ಕೊಡೋಕ್ಕಾಗೋಲ್ಲ''.

ವಕೀಲರು ಶಾಂತವಾಗಿ : ''ಸರೀ ಸ್ವಾಮಿ. ಹಾಗಾದ್ರೇ Amended C.P.C. ಓದೋಕ್ಕೆ ಕಾಲಾವಕಾಶ ಕೊಡಿ''.

**– ಅಂಜನಾ ಸುಂದರ್**

☐ ''ಎರಡನೇ ಮದುವೆ ಆದರೇನಂತೆ, ನನ್ನ ಗಂಡ ಭೂಲೋಕಕ್ಕಿಂತ, ಸ್ವರ್ಗವಾಸಿ ಅನ್ನೋದು ತೋರಿಸಿಕೊಡ್ತಾ ಇದ್ದಾರೆ''.

''ಮೊದಲನೇ ಹೆಂಡತಿ ಎಲ್ಲಿದ್ದಾಳೆ ಈಗ ?''

''ಸ್ವರ್ಗವಾಸಿ !''

**– ಆಧಾರ**

## ಉದ್ದೇಶಗಳ ಆಧಾರದ ಮೇಲೆ ಅಪರಾಧಕ್ಕೆ ಶಿಕ್ಷೆ ನಿರ್ಧಾರ

ಒಬ್ಬ ವ್ಯಕ್ತಿ ಇನ್ನೊಬ್ಬನ ಮೇಲೆ ಆಕ್ರಮಣ ಮಾಡುವುದು ಮೂರು ಮುಖ್ಯ ಸಂದರ್ಭಗಳಲ್ಲಿ ಮಾತ್ರ. ಇದರಲ್ಲಿ ಮೊದಲನೆಯದು ಕ್ಷುಲ್ಲಕ ಕಾರಣಗಳಿಗಾಗಿ ಜಗಳ ಆಡಿ ಒಬ್ಬರ ಮೇಲೊಬ್ಬರು ಕೈ ಮಾಡಿ ಗಾಯವನ್ನುಂಟು ಮಾಡುವುದು. ಇಂತಹ ಪ್ರಕರಣದಲ್ಲಿ ಒಬ್ಬ ಆಕ್ರಮಣ ಮಾಡುತ್ತಾನೆ. ಇನ್ನೊಬ್ಬ ಪ್ರತಿ ಆಕ್ರಮಣ ಮಾಡಬಹುದು, ಇಲ್ಲವೇ ಸುಮ್ಮನೆ ಇರಬಹುದು ಅಥವಾ ಆತ್ಮರಕ್ಷಣೆಗೆ ಬೇಕಾದಷ್ಟು ಪ್ರತಿರೋಧ ವ್ಯಕ್ತಪಡಿಸಬಹುದು. ಎರಡನೆಯ ಸಂದರ್ಭ ಎಂದರೆ ಒಬ್ಬ ವ್ಯಕ್ತಿಗೆ ಗಾಯ ಮಾಡಬೇಕೆಂಬ ದುರುದ್ದೇಶ ಇಟ್ಟುಕೊಂಡು ಅಂದರೆ ಹೆಣ್ಣು–ಹೊನ್ನು–ಮಣ್ಣು ಮತ್ತಿತರ ಯಾವುದೇ ಕಾರಣಕ್ಕೆ ಒಬ್ಬನಿಗೆ ಬುದ್ಧಿ ಕಲಿಸಬೇಕೆಂಬ ಉದ್ದೇಶದಿಂದ ಅವನನ್ನು ಗಾಯಗೊಳಿಸುವುದು. ಮೂರನೇ ಸಂದರ್ಭ ಎಂದರೆ ಗಾಯ ಉಂಟು ಮಾಡಿ ಅದರ ಪರಿಣಾಮವಾಗಿ ದುರ್ಲಾಭ ಪಡೆಯುವುದು. ಅಂದರೆ ಗಾಯ ಮಾಡಿ ಒಬ್ಬ ಮನುಷ್ಯನ ಮೈಮೇಲಿನ ಆಭರಣ ಕಸಿದುಕೊಳ್ಳಬಹುದು. ಇಲ್ಲವೇ ಗಾಯ ಮಾಡಿ ಭಯ ತರಿಸಿ ಒಬ್ಬ ವ್ಯಕ್ತಿಯು ಒಂದು ಕೃತ್ಯ ಮಾಡದಂತೆ ತಡೆಯಬಹುದು. ಇಲ್ಲವೇ ಗಾಯ ಮಾಡಿ ಇನ್ನೊಬ್ಬನು ಕುಕೃತ್ಯ ಮಾಡುವಂತೆ ಪ್ರಚೋದಿಸಬಹುದು. ಮೂರನೇ ಸಂದರ್ಭದಲ್ಲಿ ಹೇಳಿರುವ ವಿವಿಧ ಕೃತ್ಯಗಳಿಗೆ ಭಾರತ ದಂಡ ಸಂಹಿತೆಯು ವಿವಿಧ ರೀತಿಯ ಶಿಕ್ಷೆಗಳನ್ನು ನಮೂದು ಮಾಡಿದೆ.

ಯಾವುದಾದರೂ ಸ್ಥಿರ ಅಥವಾ ಚರ ಆಸ್ತಿ ಲಪಟಾಯಿಸುವ ಉದ್ದೇಶದಿಂದ ಭಾರಿ ಗಾಯ ಉಂಟು ಮಾಡಿದರೆ ಆರೋಪಿಗೆ ಜೀವಾವಧಿ ಶಿಕ್ಷೆ ವಿಧಿಸಬಹುದು. ಕಡಿಮೆ ಅಂದರೆ ೧೦ ವರ್ಷಗಳ ವರೆಗೆ ಜೈಲಿಗೆ ಕಳಿಸಬಹುದು. ಉದಾಹರಣೆಗೆ ಒಬ್ಬ ವ್ಯಕ್ತಿ ಇನ್ನೊಬ್ಬನಿಗೆ ಭಾರಿ ಗಾಯ ಉಂಟು ಮಾಡಿ ಅವನ ಬಳಿ ಇರುವ ಕೆಲವು ಪ್ರಾಮುಖ್ಯ ದಾಖಲೆಗಳನ್ನು ಕಸಿದುಕೊಳ್ಳುತ್ತಾನೆ. ಇಂತಹ ಸಂದರ್ಭದಲ್ಲಿ ಭಾರತ ದಂಡ ಸಂಹಿತೆಯ ಕಲಂ ೩೨೯ ಜಾರಿಯಲ್ಲಿ ತರಬಹುದು. ಕೆಲವು ಬಾರಿ ಗಾಯ ಮಾಡಿ ಬಲಾತ್ಕಾರದಿಂದ ಕೆಲವು ಆಸ್ತಿಗೆ ಸಂಬಂಧಿಸಿದ ದಾಖಲೆಗಳ ಮೇಲೆ ಸಹಿ ಪಡೆಯುವುದು. ಆಗಲೂ ಇದೇ ಕಲಂ ಜಾರಿಗೆ ಬರುತ್ತದೆ.

ತಪ್ಪೊಪ್ಪಿಗೆ ಹೇಳಿಕೆ ಕೊಡಲು ಗಾಯ ಮಾಡುವುದು ಕಲಂ ೩೩೦ರ ರೀತ್ಯ ಅಪರಾಧ. ಯಾವನಾದರೂ ವ್ಯಕ್ತಿ ಇನ್ನೊಬ್ಬನಿಗೆ ಗಾಯ ಮಾಡಿ ಆ ಒತ್ತಡದಿಂದ ತಪ್ಪೊಪ್ಪಿಗೆ ಹೇಳಿಕೆ ಕೊಡುವಂತೆ ಮಾಡಿದರೆ ಅದು ಅಪರಾಧ ಆಗುತ್ತದೆ. ಉದಾಹರಣೆಗೆ ಒಬ್ಬ ಪೊಲೀಸ್ ಅಧಿಕಾರಿ ಕಳ್ಳನೊಬ್ಬನನ್ನು ಹಿಡಿದು ಅವನಿಗೆ ಚಿತ್ರಹಿಂಸೆ ಕೊಟ್ಟು ಆ ಕಳ್ಳನಿಂದ ತಪ್ಪೊಪ್ಪಿಗೆ ಹೇಳಿಕೆ ಬರೆಸಿಕೊಂಡರೆ ಪೊಲೀಸ್ ಅಧಿಕಾರಿಯನ್ನು ಈ ಕಲಮಿನ ಅನ್ವಯ ಆರೋಪಿಯನ್ನಾಗಿ ಮಾಡಬಹುದಾಗಿದೆ. ಅದೇ ರೀತಿ ಒಬ್ಬ ಪೊಲೀಸ್ ಅಧಿಕಾರಿ ಒಬ್ಬ ಕಳ್ಳನಿಗೆ ಚಿತ್ರಹಿಂಸೆ ಕೊಟ್ಟು ಆ ಕಳ್ಳನು ಕದ್ದಿರುವ ಮಾಲನ್ನು ಬಚ್ಚಿಟ್ಟಿರುವ ಸ್ಥಳ ತೋರಿಸಲು ಬಲಾತ್ಕಾರ ಮಾಡಿದರೆ ಅಥವಾ ಹೊಡೆದರೆ ಆಗಲೂ ಈ ಕಲಂ ಲಾಗು ಆಗುತ್ತದೆ. ಕಲಂ ೩೩೦ ಜಾರಿಗೊಳಿಸಲು ಆರೋಪಿಯು ಪೊಲೀಸ್ ಅಧಿಕಾರಿಯೇ ಆಗಿರಬೇಕೆಂಬ ನಿಯಮ ಇಲ್ಲ. ಒಬ್ಬ ಮನೆ ಮಾಲೀಕನು ತನ್ನ ಬಾಡಿಗೆದಾರನನ್ನು ಮನೆ ಬಿಡಿಸಲು ಹೊಡೆದರೆ ಆಗಲೂ ಈ ಕಲಮನ್ನು ಜಾರಿಗೆ ತರಬಹುದು. ಅದೇ ರೀತಿ ಒಬ್ಬ ಜಮೀನ್ದಾರ ತನ್ನ ಜಮೀನಿನ ಸಾಗುವಳಿದಾರನಿಂದ ಜಮೀನು ಬಿಡಿಸಿಕೊಳ್ಳುವ ಉದ್ದೇಶದಿಂದ ಗಾಯ ಮಾಡಿದರೆ ಆಗಲೂ ಅವನು ಭಾರತ ದಂಡ ಸಂಹಿತೆಯ ಕಲಂ ೩೩೦ರನ್ವಯ ೭ ವರ್ಷಗಳ ಕಾಲ ಜೈಲುಶಿಕ್ಷೆಗೆ ಪಾತ್ರನಾಗುತ್ತಾನೆ.

ಮೇಲೆ ಹೇಳಿದ ಕಾರಣಗಳಿಗಾಗಿ ಅಂದರೆ ಆಸ್ತಿಯ ಪರಭಾರೆಯನ್ನು ತಡೆಯಲು ಅಥವಾ ತಪ್ಪೊಪ್ಪಿಗೆ ಹೇಳಿಕೆಯನ್ನು ಪಡೆದುಕೊಳ್ಳಲು ಇನ್ನೊಬ್ಬ ವ್ಯಕ್ತಿಗೆ ಭಾರಿ ಗಾಯ ಉಂಟು ಮಾಡಿದರೆ ಕಲಂ ೩೩೧ರ ಅನ್ವಯ ೧೦ ವರ್ಷಗಳ ಕಾಲ ಜೈಲಿಗೆ ಕಳಿಸಿ ಜುಲ್ಮಾನೆಯನ್ನು ಹಾಕಬಹುದಾಗಿದೆ. ಕಲಂ ಜಾರಿಗೆ ಬರುವುದು ಸಾದಾ ಗಾಯ ಪ್ರಕರಣಗಳಲ್ಲೇ.

ಎಷ್ಟೋ ಬಾರಿ ಸಾರ್ವಜನಿಕ ಸೇವಕರು ತಮ್ಮ ಕೆಲಸವನ್ನು ಮಾಡುವಾಗ ಆ ಕಾರ್ಯವನ್ನು ಅಡ್ಡಿಪಡಿಸಬೇಕೆಂಬ ದುರುದ್ದೇಶದಿಂದ ಜನರು ಆತನಿಗೆ ಹೊಡೆಬಡೆ ಮಾಡುವುದೂ ಉಂಟು. ಉದಾಹರಣೆಗೆ ಕೆಲವು ಜನ ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ ಟಿಕೆಟ್ ಇಲ್ಲದೆ ಪ್ರಯಾಣ ಮಾಡುತ್ತಿರುತ್ತಾರೆ. ಬಸ್ಸಿನ ನಿರ್ವಾಹಕ ಅವರನ್ನು ಟಿಕೆಟ್ ಪಡೆಯಲು ಕೋರಿದಾಗ ಆ ಗುಂಪು ನಿರ್ವಾಹಕರೊಡನೆ ಜಗಳ ತೆಗೆದು ಆತನಿಗೆ ಹೊಡೆದು ಅವನ ಶರ್ಟ್ ಹರಿಯುತ್ತಾರೆ. ಪೊಲೀಸ್ ಪೇದೆಯೊಬ್ಬನು ಒಂದು ಹಳ್ಳಿಗೆ ನ್ಯಾಯಾಲಯದ ಸಮನ್ಸ್ ಜಾರಿ ಮಾಡಲು ಹೋದಾಗ ಸಮನ್ಸಿನಲ್ಲಿ ನಮೂದಾಗಿರುವ ವ್ಯಕ್ತಿ ಅವನನ್ನು ಕಟ್ಟಿ ಹಾಕಿ ಅವನಿಗೆ ಹೊಡೆದು ಅವನು ತಂದ ಸಮನ್ಸ್ ಅನ್ನು ಹರಿದು ಹಾಕಿರುವ ಹಲವಾರು ಪ್ರಕರಣಗಳು ದಾಖಲಾಗಿವೆ. ಇಂತಹ ಪ್ರಕರಣಗಳು ಎದುರಾದಾಗ ಭಾರತ ದಂಡ ಸಂಹಿತೆಯ ಕಲಂ ೩೩೨ ಅನ್ನೂ ಬಳಸಬಹುದು. ಈ ಕಲಮಿನನ್ವಯ ಯಾವನಾದರೂ ಸಾರ್ವಜನಿಕ ಸೇವಕನಿಗೆ ಆತನು ಮಾಡುವ ಕರ್ತವ್ಯಕ್ಕೆ ಅಡ್ಡಿಯುಂಟು ಮಾಡಿ ಹೊಡೆಬಡೆ ಮಾಡಿದರೆ ಆ ಆರೋಪಕ್ಕೆ ೩ ವರ್ಷಗಳವರೆಗೆ ಜೈಲಿಗೆ ಕಳಿಸಿ, ಜುಲ್ಮಾನೆಯನ್ನು ಹಾಕಬಹುದಾಗಿದೆ. ಒಂದು ವೇಳೆ ಸಾರ್ವಜನಿಕ ಸೇವಕನಿಗೆ ಭಾರಿ ಗಾಯ ಉಂಟು ಮಾಡಿದರೆ ಅಂತಹ ವ್ಯಕ್ತಿಗೆ ದಂಡ ಸಂಹಿತೆಯ ಕಲಂ ೩೩೩ರಂತೆ ೧೦ ವರ್ಷಗಳ ಕಾಲ ಜೈಲಿಗೆ ಕಳಿಸಿ ಜುಲ್ಮಾನೆ ವಿಧಿಸಬಹುದಾಗಿದೆ. ಕಲಂ ೩೩೨ ಹಾಗೂ ೩೩೩ ಜಾರಿ ಮಾಡುವಾಗ ಗಮನಿಸಬೇಕಾದ ಪ್ರಮುಖ ಅಂಶ ಎಂದರೆ ಅಪರಾಧ ನಡೆಯುವ ಸಮಯದಲ್ಲಿ ಸಾರ್ವಜನಿಕ ಸೇವಕನು ಕರ್ತವ್ಯನಿರತನಾಗಿರಬೇಕು. ಉದಾಹರಣೆಗೆ ರಾಮ ಎನ್ನುವ ಸರಕಾರಿ ಕಾರಕೂನ ಭೀಮನಿಂದ ಸಾಲ ಪಡೆದು ತೀರಿಸಿರುವುದಿಲ್ಲ. ತನ್ನ ಸಾಲ ವಾಪಸ್ ಕೊಡು ಎಂದು ಎಷ್ಟು ಕೇಳಿದರೂ ರಾಮು ಸಬೂಬು ಹೇಳಿ ತಪ್ಪಿಸಿಕೊಂಡಿರುತ್ತಾನೆ. ಕಚೇರಿ ಕೆಲಸ ಮುಗಿಸಿಕೊಂಡು ರಾಮ ಮನೆಗೆ ಹೋಗುತ್ತಿರುವಾಗ ಭೀಮನು ಅವನಿಗೆ ಹೊಡೆದರೆ ಕಲಂ ೩೩೨ ಅನ್ವಯ ಆಗುವುದಿಲ್ಲ. ಏಕೆಂದರೆ ಹೊಡೆದವನ ಉದ್ದೇಶ ರಾಮನು ಕರ್ತವ್ಯ ವಿಮುಖನಾಗಬೇಕು ಎನ್ನುವುದು ಆಗಿರದೇ ತನ್ನ ಸಾಲ ಮರಳಿ ಪಡೆಯುವುದೇ ಆಗಿರುತ್ತದೆ. ಕೆಲವು ಸಾರ್ವಜನಿಕ ಸೇವಕರನ್ನು ಸದಾಕಾಲವೂ ಕರ್ತವ್ಯದ ಮೇಲೆ ಇಟ್ಟಿರುತ್ತಾರೆ ಎಂದೇ ಪರಿಗಣಿಸುವಾಗ ಇಂತಹ ಸಾರ್ವಜನಿಕ ಸೇವಕರಿಗೆ ಯಾರಾದರೂ ಹೊಡೆದರೆ ಆಗ ಕಲಂ ೩೩೨ ಅಥವಾ ೩೩೩ ಜಾರಿ ಮಾಡಬಹುದೇ ? ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಉದಾಹರಣೆಗೆ ಪೋಲೀಸರನ್ನು ೨೪ ಗಂಟೆಗಳ ಕಾಲವೂ ಕರ್ತವ್ಯದ ಮೇಲೆ ಇಟ್ಟಿರುತ್ತಾರೆ ಎಂದು ಭಾವಿಸಲಾಗುತ್ತದೆ. ಕಾನೂನಿನಲ್ಲಿ ಗಮನಿಸಬೇಕಾದ್ದು ಅಂದರೆ ಸಾರ್ವಜನಿಕ ಸೇವಕನಿಗೆ ಹೊಡೆಯುವ ಏಕೈಕ ಉದ್ದೇಶ. ಅವನು ತಾನು ಮಾಡಬೇಕೆಂದಿರುವ ಕರ್ತವ್ಯವನ್ನು ಮಾಡದೇ ಸುಮ್ಮನೆ ಇರಲು, ಹಿಂದಿರುಗಿ ಹೋಗಲು ಹೊಡೆಯುವ ಹಿಂದೆ ಈ ಉದ್ದೇಶ ಇರದಿದ್ದರೆ ಈ ಎರಡೂ ಕಲಮುಗಳನ್ನು ಜಾರಿ ಮಾಡುವಂತಿಲ್ಲ.

ಎಷ್ಟೋ ಬಾರಿ ಇದ್ದಕ್ಕಿದ್ದಂತೆ ಉಂಟಾದ ಪ್ರಚೋದನೆಯಿಂದ ಒಬ್ಬ ವ್ಯಕ್ತಿ ಸಿಟ್ಟಾಗಿ ಎದ್ದು ಇನ್ನೊಬ್ಬನಿಗೆ ಹೊಡೆಯಬಹುದು. ಉದಾಹರಣೆಗೆ ಅ ಎನ್ನುವವನು ಬ ಎನ್ನುವವನ ಜೊತೆ ಮಾತನಾಡುತ್ತಾ ನಿನ್ನ ಹೆಂಡತಿ ವ್ಯಭಿಚಾರ ಮಾಡುತ್ತಾಳೆ ಎಂದು ಹೇಳಿದಾಗ ತನ್ನ ಹೆಂಡತಿಯ ಶೀಲದ ಬಗ್ಗೆ ಹಗುರವಾಗಿ ಮಾತನಾಡಿದ ಎಂದು ಉದ್ರೇಕಗೊಂಡ ಆ ಎದುರಾಳಿಗೆ ಹೊಡೆದು ಸಾದಾ ಗಾಯ ಮಾಡಬಹುದು ಅಥವಾ ಭಾರಿ ಗಾಯ ಮಾಡಬಹುದು. ಈ ಸಂದರ್ಭದಲ್ಲಿ ಒಬ್ಬ ವ್ಯಕ್ತಿಗೆ ಗಾಯ ಮಾಡಬೇಕೆನ್ನುವ ಉದ್ದೇಶವೇ ಇರುವುದಿಲ್ಲ. ಏಕಾಏಕಿ ಉದ್ಭವವಾದ ಬೆಳವಣಿಗೆಯಿಂದ ಮನಸ್ಸು ಉದ್ರೇಕಗೊಂಡು ಕೃತ್ಯ ಘಟಿಸುತ್ತದೆ. ಕೃತ್ಯದ ಹಿಂದೆ ಯಾವುದೇ ಪೂರ್ವಯೋಜನೆ ಇರುವುದಿಲ್ಲ. ಇಂತಹ ಕೃತ್ಯದ ಫಲವಾಗಿ ಒಬ್ಬ ವ್ಯಕ್ತಿ ಸಾದಾ ಗಾಯ ಮಾಡಿದರೆ ಅವನಿಗೆ ಭಾರತ ದಂಡ ಸಂಹಿತೆಯ ಕಲಂ ೩೩೪ರ ಅನ್ವಯ ಒಂದು ತಿಂಗಳವರೆಗೆ ಜೈಲಿಗೆ ಕಳಿಸಿ ೫೦೦ ರೂ.ಗಳವರೆಗೆ ಜುಲ್ಮಾನೆ ಹಾಕಬಹುದಾಗಿದೆ. ಒಂದು ವೇಳೆ ಪ್ರಚೋದನೆಗೆ ಒಳಗಾಗಿ ಭಾರಿ ಗಾಯ ಮಾಡಿದರೆ ಅಂತಹ ವ್ಯಕ್ತಿಗೆ ೪ ವರ್ಷಗಳ ಕಾಲ ಜೈಲಿಗೆ ಕಳಿಸಿ ೨೦೦೦ ರೂ.ಗಳವರೆಗೆ ಜುಲ್ಮಾನೆ ಹಾಕಬಹುದಾಗಿದೆ.

ಇನ್ನೊಬ್ಬರ ಜೀವಕ್ಕೆ ಅಪಾಯ ಉಂಟು ಮಾಡುವಂತಹ ಕೃತ್ಯ ದಂಡ ಸಂಹಿತೆಯ ಅಪರಾಧ ಎಂದೇ ಪರಿಗಣಿಸಿದೆ. ಯಾವನಾದರೂ ವ್ಯಕ್ತಿ ಇನ್ನೊಬ್ಬರ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಒಂದು ಕೃತ್ಯವನ್ನು ನಿಷ್ಕಾಳಜಿಯಿಂದಾಗಲೀ ಅಥವಾ ಅಜಾಗರೂಕತೆಯಿಂದಾಗಲಿ ಮಾಡಿದರೆ ಅವನಿಗೆ ೩ ತಿಂಗಳ ಕಾಲ ಜೈಲು ಶಿಕ್ಷೆ ವಿಧಿಸಬಹುದು.

**(ಆಧಾರ)**

## ಸಂಸಾರ - ಸಾಗರ

ಗಂಡ : ಪಾರು, ನಿಂಗೂ ವಯಸ್ಸಾಯ್ತು ಸ್ವಲ್ಪ ರೆಸ್ಟ್ ತಗೋ. ಒಂದೇ ಸಮನೆ ಕೆಲ್ಸ ಮಾಡ್ತಾ ಇರ್ಬೇಡ. ನಿನ್ನ ಕೈಲಿ ಆಗೋದಿಲ್ಲ.

ಹೆಂಡ್ತಿ : ರೀ, ಏನ್ರೀ ನೀವು ನಂಗೆ ವಯಸ್ಸಾಯ್ತು ಅಂತ ಇದೀರಾ; ರೆಸ್ಟ್ ತಗೋ ಅಂತ ಇದೀರಾ; ನಾನೇನು ಮುದುಕಿ ತರಹ ಕಾಣ್ತಾ ಇದೀನಾ ನಿಮ್ಗೆ?

ಗಂಡ : ಅಯ್ಯೋ ಹಾಗಾದ್ರೆ ನಿನ್ಗೆ ವಯಸ್ಸಾಗಿಲ್ವೇನೆ ?.... ನೀನೇ ಅಂತ ಇರ್ತೀ ಆಗಾಗ... ನಂಗೂ ವಯಸ್ಸಾಯ್ತು ನನ್ನ ಕೈಲಿ ಆಗೋದಿಲ್ಲ ಅಂತ.

ಹೆಂಡ್ತಿ : ನಾನಂದ್ಕೊಂಡ್ರೆ ಪರವಾಗಿಲ್ಲರೀ... ಆದ್ರೆ ಹಾಗೆ ನಿಮ್ಗೆ ಅನ್ನಬಾರ್ದು ರೀ. ಅವಾಗ್ಲೆ ತಾಪತ್ರಯ. ಮಹಾ ರಸಿಕರು ಬೇರೆ ನೀವು. ನಿಜ ಹೇಳ್ರೀ ನಾನು ನಿಮ್ಮ ಕಣ್ಣಿಗೆ ವಯಸ್ಸಾದ ಹಾಗೆ ಕಾಣ್ತೇನಾ?

ಗಂಡ : (ತಬ್ಬಿಬ್ಬಾಗಿ) ಛೇ...ಛೇ... ಇಲ್ವೇ ನೀನೇನು ಅಷ್ಟೊಂದು ವಯಸ್ಸಾದ ಹಾಗೆ ಕಾಣ್ತಾ ಇಲ್ಲ ಬಿಡು. ನೀನು ದಿನನಿತ್ಯ ಜಾಗಿಂಗ್, ವಾಕಿಂಗ್ ಅಂತ ಎಷ್ಟು ಕಷ್ಟ ಪಡ್ತಾ ಇದೀಯ, ಏನ್ ಕತೆ ? ಏನೋ ನೋಡೋದಿಕ್ಕೆ ನಾನು ಸ್ವಲ್ಪ ಚಿಕ್ಕೋನಾಗಿ ಕಾಣ್ತೇನಿ ಅಷ್ಟೆ. ಒಂಥರಾ ಎರಡನೇ ಯೌವನ ೪೦ರ ವಯಸ್ಸಿನಲ್ಲಿ ಅಂತಾರಲ್ಲ ಹಾಗೆ.

**ಶ್ರೀಮತಿ ಲತಾ ವಿ. ಮೂರ್ತಿ**

ಪ್ರಕಾಶಕರು : ಲಹರಿ ವಕೀಲರ ವೇದಿಕೆ, ಸಂ. ೨೯೮೦ ''ಲಕ್ಷ್ಮೀದೀಪ್'', ೧೭ನೇ ಅಡ್ಡರಸ್ತೆ, ಬನಶಂಕರಿ ೨ನೇ ಹಂತ, ಬೆಂಗಳೂರು–೫೬೦೦೭೦. ಮುದ್ರಕರು : ಪರಿಮಳ ಮುದ್ರಣಾಲಯ ಮೌಂಟ್‌ಜಾಯ್ ಬಡಾವಣೆ, ಹನುಮಂತನಗರ, ಬೆಂಗಳೂರು–೫೬೦೦೧೯, ದೂರವಾಣಿ : ೬೭೨೫೫೧೬. ಸಂಪಾದಕರು : ಜಿ. ಎಸ್. ನಟರಾಜನ್, ಸಹ ಸಂಪಾದಕರು : ವಿ. ಎನ್. ಮೂರ್ತಿ